ಆ ದಿನ ಬೆಳಿಗ್ಗೆ ಕನ್ನಡದ ಪ್ರಮುಖ ವೃತ್ತಪತ್ರಿಕೆಗಳನ್ನು ಕೈಗೆತ್ತಿಕೊಂಡ ಹಲವರ ಹುಬ್ಬು ಒಮ್ಮೆಲೇ ಅಚ್ಚರಿಯಲ್ಲಿ ಮೇಲಕ್ಕೇರಿತ್ತು. ಅವರನ್ನು ಅಂಥ ಅಚ್ಚರಿಗೆ ಕೆಡವಿದ್ದು ಪತ್ರಿಕೆಯ ಮುಖಪುಟದಲ್ಲಿ ಇಡೀ ಪುಟವನ್ನು ಆವರಿಸಿಕೊಂಡಿದ್ದ ಒಂದು ಜಾಹೀರಾತು. ಜಾಹೀರಾತಿನಲ್ಲಿ ಅಂಥ ವಿಶೇಷವೇನಿರಲಿಲ್ಲ. ಒಬ್ಬ ತರುಣನ ಚಿತ್ರ, ಜೊತೆಗೆ 'ಕ್ರಿಯೇಟಿಂಗ್ ಫಾರ್ ಇಂಡಿಯಾ' ಎಂಬ ಶೀರ್ಷಿಕೆ. ಆ ತರುಣನ ಮುಖ ರಂಗಭೂಮಿ ಪ್ರಿಯರಿಗೆ, ಚಿತ್ರರಂಗದ ಒಂದಿಷ್ಟು ಜನರಿಗೆ, ಬಿ.ಎಂ. ಗಿರಿರಾಜ್ ಅವರ 'ಅಮರಾವತಿ' ಸಿನಿಮಾ ನೋಡಿದ ಮತ್ತೊಂದಿಷ್ಟು ಮಂದಿಗಷ್ಟೇ ಪರಿಚಯ. ಈ ಹುಡುಗ ಇಲ್ಲಿ? ಹೇಗೆ? ಎಂಬ ಪ್ರಶ್ನೆಗಳಿಗೆ ನೇರವಾದ ಉತ್ತರವೇನೂ ಆ ಜಾಹೀರಾತಿನಲ್ಲಿ ಇರಲಿಲ್ಲ. ಆದರೆ ಸ್ಪಷ್ಟವಾದ ಸುಳಿವಂತೂ ಇತ್ತು.

ಅದು 'ಕಲಾಮಾಧ್ಯಮ' ಎಂಬ ಯೂಟ್ಯೂಬ್ ಚಾನಲ್ ಕುರಿತು, ಯೂಟ್ಯೂಬ್‌ನವರೇ ನೀಡಿದ ಜಾಹೀರಾತು! ಆ ಕಲಾಮಾಧ್ಯಮದ ಸಾರಥಿಯಾಗಿದ್ದವರು ಕೆ.ಎಸ್. ಪರಮೇಶ್ವರ್ ಎಂಬ ಆ ಹೊಳಪುಕಣ್ಣಿನ ಉತ್ಸಾಹಿ ತರುಣ. ನಂತರದ ದಿನಗಳಲ್ಲಿ ಹಲವು ಪತ್ರಿಕೆಗಳಲ್ಲಿ, ಟೀವಿ ವಾಹಿನಿಗಳಲ್ಲಿ ಪರಮೇಶ್ವರ್ ಸಂದರ್ಶನ, 'ಕಲಾಮಾಧ್ಯಮ'ದ ಕುರಿತ ವರದಿಗಳು ಪ್ರಕಟವಾದವು. ನೋಡನೋಡುತ್ತಿದ್ದ ಹಾಗೆಯೇ ಪರಮೇಶ್ವರ್ ಯಶಸ್ಸಿನ ಹೊಸ ಮಾದರಿಯೊಂದನ್ನು ನಾಡಿನ ಮುಂದಿಟ್ಟುಬಿಟ್ಟಿದ್ದರು. ಆ ಮಾದರಿ ಒಂದು ಯೂಟ್ಯೂಬ್ ಚಾನಲ್!

***

ಅದು ಉತ್ತರ ಪ್ರದೇಶದ ರಖ್ವಾ ಎಂಬ ಪುಟ್ಟ ಹಳ್ಳಿ. ಆ ಕುಗ್ರಾಮದಲ್ಲಿ ಐವತ್ತರ ಆಸುಪಾಸಿನ ಸಾಮಾನ್ಯ ಮಹಿಳೆಯೊಬ್ಬರು ದಿಢೀರನೆ ಜನಪ್ರಿಯರಾದರು. ಐದನೇ ತರಗತಿವರೆಗೆ ಓದಿ ಮನೆಗೆಲಸ ಮಾಡಿಕೊಂಡಿದ್ದ, ತಂತ್ರಜ್ಞಾನದ ಗಂಧವೇ ತಿಳಿಯದ ಅವರಿಗೆ ಸಿಕ್ಕ ಜನಪ್ರಿಯತೆ ಉಳಿದವರನ್ನು ಅಚ್ಚರಿಗೆ ಕೆಡವಿತ್ತು. ಬರೀ ಜನಪ್ರಿಯತೆ ಅಷ್ಟೇ ಅಲ್ಲ, ಪ್ರತಿ ತಿಂಗಳು ಸಾವಿರಾರು ರೂಪಾಯಿಗಳೂ ಅವರ ಖಾತೆಯಲ್ಲಿ ಜಮಾ ಆಗುತ್ತಿದ್ದವು. ಉಳಿದವರಿಗೆ ಬಿಡಿ, 'ಇದೆಲ್ಲಾ ನಿಜಕ್ಕೂ ಸಾಧ್ಯವೇ?' ಎಂಬ ಅಚ್ಚರಿ ಸ್ವತಃ ಆ ಮಹಿಳೆಯನ್ನೇ ಬಹಳ ದಿನ ಆವರಿಸಿತ್ತು!

2017ರಲ್ಲಿ ತಮ್ಮ ಮಕ್ಕಳ ಸಹಾಯದೊಂದಿಗೆ 'ಅಮ್ಮ ಕೀ ಥಾಲಿ' ಯೂಟ್ಯೂಬ್ ಚಾನಲ್ ಆರಂಭಿಸಿದ ಶಶಿಕಲಾ ಚೌರಾಸಿಯಾ, ಈಗ ಪ್ರತಿ ತಿಂಗಳು ಸುಮಾರು 70 ಸಾವಿರ ರೂಪಾಯಿವರೆಗೂ ಹಣ ಸಂಪಾದನೆ ಮಾಡುತ್ತಿದ್ದಾರೆ. ಅವರ ಬದುಕಷ್ಟೇ ಅಲ್ಲ, ಸಮಾಜದಲ್ಲಿನ ಅವರ ಸ್ಥಾನಮಾನವೂ ಬದಲಾಗಿದೆ.

ಇದಕ್ಕೆ ಕಾರಣವಾಗಿದ್ದು ಒಂದು ಯೂಟ್ಯೂಬ್ ಚಾನಲ್!

ಮೇಲೆ ಉಲ್ಲೇಖಿಸಿದ್ದಂಥ ಹತ್ತು ಹಲವು ಉದಾಹರಣೆಗಳು ನಮ್ಮ ಸುತ್ತಮುತ್ತಲಿನಲ್ಲಿಯೇ, ಮೊಬೈಲ್ ಪರದೆಯ ಮೇಲಿನ ಹೆಬ್ಬೆರಳ ಸ್ಪರ್ಶದಲ್ಲಿಯೇ ಸಿಗುತ್ತವೆ. ಯೂಟ್ಯೂಬ್ ಚಾನಲ್‌ಗಳು ಹವ್ಯಾಸಕ್ಕಷ್ಟೇ ಯೋಗ್ಯ. ಅದರಲ್ಲಿ ಹಣ ಮಾಡಬೇಕು ಅಂದರೆ ದೊಡ್ಡ ಬಂಡವಾಳ ಹೂಡಲು ಸಿದ್ಧರಿರಬೇಕು, ವಿಶೇಷ ತರಬೇತಿ ಬೇಕು, ದುಬಾರಿ ಕ್ಯಾಮೆರಾಗಳು ಬೇಕು, ತಂತ್ರಜ್ಞಾನದ ಬಗ್ಗೆ ಅಧ್ಯಯನ ಮಾಡಿರಬೇಕು, ಇಂಗ್ಲಿಷ್ ಬರಬೇಕು ಎಂಬೆಲ್ಲ ಮಿಥ್ಯೆಗಳ ಸಾಲು ಸಾಲು ಗುಳ್ಳೆಗಳನ್ನು ಈ ಮಾದರಿಗಳು ಠುಸ್ ಅನ್ನಿಸಿವೆ.

## ಬದಲಾಗುತ್ತಿದೆ ರೂಪ-ಸ್ವರೂಪ

ಸಣ್ಣ ಪುಟ್ಟ ವಿಡಿಯೊಗಳನ್ನು ನೋಡಲು ಮಾತ್ರ ಬಳಕೆಯಾಗುತ್ತಿದ್ದ, ಅಭಿವ್ಯಕ್ತಿ ಮಾಧ್ಯಮವಾಗಿಯೇ ಹೆಚ್ಚು ಪ್ರಚಲಿತದಲ್ಲಿದ್ದ ಯೂಟ್ಯೂಬ್ ಚಾನಲ್‌ಗಳ ಸ್ವರೂಪ ರೂಪಾಂತರ ಹೊಂದುತ್ತಿದೆ. ಯೂಟ್ಯೂಬ್ ಮೂಲಕ ಹಣ ಸಂಪಾದನೆ ಸಾಧ್ಯವಿದೆ ಎಂಬುದನ್ನು ತೋರಿದ, ಈ ಹಾದಿಯಲ್ಲಿ ಯಶಸ್ಸು ಕಾಣುತ್ತಿರುವವರ ಸಂಖ್ಯೆಯೂ ಅಧಿಕವಾಗುತ್ತಿದೆ. ಕನ್ನಡದ ಮಟ್ಟಿಗಿನ ಡಿಜಿಟಲ್ ಮಾಧ್ಯಮದಲ್ಲಿ ಸದ್ಯಕ್ಕಿದು ಹೊಸ ಅಲೆ.

ಯೂಟ್ಯೂಬ್ ವಿಡಿಯೊಗಳನ್ನೇ ಮಾಡಿಕೊಂಡು ಕಂಟೆಂಟ್ ಕ್ರಿಯೇಟರ್ ಆಗಿ ಬದುಕು ಕಟ್ಟಿಕೊಂಡ ಎಷ್ಟೋ ಮಂದಿ ಇದ್ದಾರೆ. ಸ್ವತಂತ್ರವಾಗಿ ದುಡಿಯುವ ಮನಸ್ಸಿನಿಂದ ತಮ್ಮ ಅಭಿರುಚಿಯನ್ನೇ ಆದಾಯವಾಗಿ ಬದಲಾಯಿಸಿಕೊಂಡು ಯಶಸ್ವಿಯಾಗಿದ್ದಾರೆ. ತಂತ್ರಜ್ಞಾನ, ಹಾಸ್ಯ, ನೃತ್ಯ, ಸಂಗೀತ, ಆರೋಗ್ಯ, ಚಿತ್ರಕಲೆ, ಆಟೋಮೊಬೈಲ್, ರಂಗಭೂಮಿ, ಸಿನಿಮಾ, ಆಹಾರ, ಸಾಹಿತ್ಯ, ಶಿಕ್ಷಣ, ಕ್ರೀಡೆ, ನಾಟಕ, ಪ್ರವಾಸ – ಹೀಗೆ, ವಿಷಯ ಏನೇ ಇದ್ದರೂ ಪ್ರಾದೇಶಿಕ ಮಟ್ಟದಲ್ಲಿ ಯೂಟ್ಯೂಬ್‌ನಲ್ಲಿ ಜನರಿಗೆ ಹಿಂದೆಂದಿಗಿಂತಲೂ ಅಧಿಕ ಆಯ್ಕೆಗಳು ದೊರೆಯುತ್ತಿವೆ. ಹಣ ಗಳಿಕೆಗೆ ಚಾನಲ್ ಆರಂಭಿಸುವವರು ಒಂದೆಡೆಯಾದರೆ, ಜ್ಞಾನ ಹಂಚಿಕೆಗೆ, ಸಾಂಸ್ಥಿಕ ಮಟ್ಟದಲ್ಲಿ ಯೂಟ್ಯೂಬ್ ಖಾತೆ ತೆರೆದು ಕಾರ್ಯನಿರ್ವಹಿಸುತ್ತಿರುವವರು ಹಲವು ಮಂದಿ.

ಆದರೆ ಇವೆಲ್ಲದರ ನಡುವೆ, ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡಿದರೆ, ವಿಷಯ ಸುಸ್ಪಷ್ಟ, ಪ್ರಾಮಾಣಿಕವಾಗಿದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎನ್ನುವುದಕ್ಕೆ ಕನ್ನಡದಲ್ಲಿ ಹಲವು ನಿದರ್ಶನಗಳು ದೊರೆಯುತ್ತಿವೆ. 'ಡಾ. ಬ್ರೊ ಕನ್ನಡ', 'ಮಾಧ್ಯಮಅನೇಕ', 'ನಮ್ದುಕೆ', 'ಲೋಲ್‌ಬಾಗ್' 'ತರ್ಲೆ ಬಾಕ್ಸ್', 'ರಘು ವೈನ್ ಸ್ಟೋರ್', 'ಟೆಕ್ ಇನ್ ಕನ್ನಡ', 'ರೇಖಾ ಅಡುಗೆ ಚಾನಲ್', 'ಭಟ್ ಆ್ಯಂಡ್ ಭಟ್' 'ಭಾಗ್ಯ ಟಿ.ವಿ.', ಆಯುರ್ವೇದಕ್ಕೆಂದೇ ಜನಪ್ರಿಯವಾದ 'ನಿಸರ್ಗ ಮನೆ' – ಇಂಥ ಎಣಿಕೆಗೆ ಸಿಗದಷ್ಟು ಚಾನಲ್‌ಗಳು ಜನಪ್ರಿಯತೆ ಗಿಟ್ಟಿಸಿಕೊಳ್ಳುತ್ತಿವೆ, ದಿನೇ ದಿನೇ ಚಂದಾದಾರರ ಸಂಖ್ಯೆಯನ್ನೂ ಹಿಗ್ಗಿಸಿಕೊಳ್ಳುತ್ತಿವೆ.

